# ಕಲಬುರಗಿ ಕೃಷಿ ವಿಜ್ಞಾನ ಕೇಂದ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ

**ಕಲಬುರಗಿ:** ನಗರದ ಹೊರವಲಯದ ಆಳಂದ ರಸ್ತೆಯಲ್ಲಿರುವ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರಕ್ಕೆ 2020ನೇ ಸಾಲಿನ ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ರಾಷ್ಟ್ರೀಯ ಕೃಷಿ ವಿಜ್ಞಾನ ಕೇಂದ್ರ ಪ್ರಶಸ್ತಿ ಲಭಿಸಿದೆ.

ಈ ಪ್ರಶಸ್ತಿ 8 ಲಕ್ಷ ರೂ.ನಗದು ಮತ್ತು ಟ್ರೋಫಿ, ಪ್ರಮಾಣ ಪತ್ರ ಹೊಂದಿದೆ. ಕೃಷಿಯಲ್ಲಿ ತಂತ್ರಜ್ಞಾನಾಧಾರಿತ ಅಧಿಕ ಹಾಗೂ ಗುಣಮಟ್ಟದ ಇಳುವರಿ ಮತ್ತು ಕೃಷಿ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಕೃಷಿ ವಿಜ್ಞಾನ ಕೇಂದ್ರಗಳಿಗೆ ಈ ಪ್ರತಿಷ್ಠಿತ ಪ್ರಶಸ್ತಿ ನೀಡಲಾಗುತ್ತದೆ. ದೇಶದಲ್ಲಿರುವ ಒಟ್ಟು 722 ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರಗಳ ಪೈಕಿ ಕಲಬುರಗಿ ಕೃಷಿ ವಿಜ್ಞಾನ ಕೇಂದ್ರ ರಾಷ್ಟ್ರ ಮಟ್ಟದಪ್ರಶಸ್ತಿ ಪಡೆದು ಕೊಂಡಿವೆ.

ಕಲಬುರಗಿ ವಿಜ್ಞಾನ ಕೇಂದ್ರ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು. ಅವುಗಳಲ್ಲಿ ಪ್ರಮುಖವಾಗಿ ತೊಗರಿ ಬೆಳೆಯಲ್ಲಿ ಕಂಡು ಬರುವ ನೆಟೆ ಮತ್ತು ಗೊಡ್ಡುರೋಗ ನಿರೋಧಕ ತಳಿಗಳನ್ನು ಅಧಿಕ ಕ್ಷೇತ್ರಗಳಿಗೆ ವಿಸ್ತರಿಸಿ, ಪಲ್ಸ್‌ಮ್ಯಾಜಿಕ್ ತಂತ್ರಜ್ಞಾನದ ಬಳಕೆ ಹಾಗೂ ಸಮಗ್ರ ಕೀಟ ಮತ್ತು ರೋಗ ನಿರ್ವಹಣಾ ತಂತ್ರಜ್ಞಾನಗಳನ್ನು ರೈತರು ಅಳವಡಿಸಿಕೊಂಡರು. ಇದರಿಂದ ಹೆಚ್ಚಿನ ಹಾಗೂ ಗುಣಮಟ್ಟದ ತೊಗರಿ ಇಳುವರಿ ಪಡೆದು ಆರ್ಥಿಕ ಬಲಗೊಳ್ಳುವಲ್ಲಿ ಕೇಂದ್ರ ತೊಡಗಿಸಿಕೊಂಡಿತ್ತು.

**ಕೃಷಿಕ ಪುರಸ್ಕಾರ 2020:** ಪ್ರಗತಿಪರ ಹಾಗೂ ಕ್ರಿಯಾಶೀಲ ಕೃಷಿಕರಾದ ಹಾಳ ಸುಲ್ತಾನಪುರದ ಶರಣಬಸಪ್ಪ ಪಾಟೀಲ, ಅವರಿಗೆ ರಾಷ್ಟ್ರ ಮಟ್ಟದ 'ಐಸಿಎಆರ್–ಜಗಜೀವನ್‌ರಾಮ್ ಅವಿಷ್ಕಾರ ಕೃಷಿಕ ಪುರಸ್ಕಾರ ಪ್ರಶಸ್ತಿ–2020' ಲಭಿಸಿದೆ. ಈ ಪುರಸ್ಕಾರವು ಕೃಷಿ ಕ್ಷೇತ್ರದಲ್ಲಿ ಅವರು ಅಳವಡಿಸಿರುವ ಹಲವಾರು ತಂತ್ರಜ್ಞಾನಗಳು ಮತ್ತು ಅವಿಷ್ಕಾರಗಳಾದ ತೊಗರಿ ಕುಡಿ ಚಿವುಟುವ ಯಂತ್ರ, ಸೌರಬೇಲಿ, ನಳ ನೀರಾವರಿ, ಕಡಿಮೆ ವೆಚ್ಚದ ಹೈಡ್ರೋಪೊನಿಕ್ಸ್, ಲಿಂಬೆ ಶ್ರೇಣಿಕರಣ ಉಪಕರಣ ಮತ್ತು ಸೌರಶಕ್ತಿ ವಿದ್ಯುತ್ ದೀಪ ಬಲೆಗಳನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

17-07-2021 Vk Pg 11

# ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ

**ಬೆಂಗಳೂರು:** ಕಾಳಸಂತೆ ಅಥವಾ ಅಕ್ರಮ ದಾಸ್ತಾನು ಮಾಡಿ ರಸಗೊಬ್ಬರ ಕೃತಕ ಅಭಾವ ಸೃಷ್ಟಿಸುವ ಡೀಲರ್ಸ್, ಮಾರಾಟಗಾರರ ವಿರುದ್ಧ ಕೃಷಿ ವಿಚಕ್ಷಣಾ ದಳಕ್ಕೆ ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲು ಸೂಚಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ಶುಕ್ರವಾರ ವಿಕಾಸಸೌಧದಲ್ಲಿ ಜಿಲ್ಲಾ ಕೃಷಿ ಅಧಿಕಾರಿಗಳ ಸಭೆ ಬಳಿಕ ಮಾತನಾಡಿದ ಅವರು, ''ಮುಂಗಾರು, ಪೂರ್ವ ಮುಂಗಾರಿನಲ್ಲಿ ರಸಗೊಬ್ಬರದ ಕೊರತೆಯಾಗದಂತೆ ಇಲಾಖೆ ಕ್ರಮ ವಹಿಸಿದೆ' ಎಂದರು.

''ಸೂಕ್ಷ್ಮ ನೀರಾವರಿ ಯೋಜನೆಯಡಿ ಎಲ್ಲ ವರ್ಗದ ರೈತರಿಗೆ ಈ ಹಿಂದೆ ನೀಡುತ್ತಿದ್ದ ಸಬ್ಸಿಡಿಯನ್ನು ಮುಂದುವರಿಸಲಾಗುತ್ತಿದೆ. ಎರಡು ಹೆಕ್ಟೇರ್ ಭೂಮಿಯುಳ್ಳ ರೈತರಿಗೆ ಶೇ.90 ಹಾಗೂ 3–5 ಹೆಕ್ಟೇರ್ ಭೂಮಿ ಹೊಂದಿದ ರೈತರಿಗೆ ಶೇ.45ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಸಿಎಂ ಆದೇಶದಂತೆ ಇದೀಗ ಅದೇ ಮಾದರಿಯ ಸಬ್ಸಿಡಿ ಮುಂದುವರಿಸಲಾಗುತ್ತಿದೆ'' ಎಂದರು.

**ಬೆಳೆ ವಿಮೆ ನೋಂದಣಿ:** ''ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಒಟ್ಟು 36 ಬೆಳೆಗಳನ್ನು ಬೆಳೆ ವಿಮೆಗೆ ನೋಂದಾಯಿಸಲು ಅಧಿಸೂಚಿಸಲಾಗಿದೆ,'' ಎಂದರು.

17-07-2021 Vk Pg 04

# ಯೂರಿಯಾ ಗೊಬ್ಬರ ಕೊಳ್ಳಲು ಆಧಾರ್ ಕಾರ್ಡ್, ಪಹಣಿ ಕಡ್ಡಾಯ!

**ಹೂವಿನಹಡಗಲಿ:** ತಾಲೂಕಿನಲ್ಲಿ ಯೂರಿಯಾ ಗೊಬ್ಬರದ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಗೊಬ್ಬರ ಖರೀದಿಗೆ ಪಹಣಿ ಮತ್ತು ಆಧಾರ್ ಕಾರ್ಡ್ ಕಡ್ಡಾಯ ಮಾಡಲಾಗಿದೆ. ತಾಲೂಕಿನಲ್ಲಿ ಉತ್ತಮ ಮಳೆಯಾಗಿರುವ ಹಿನ್ನೆಲೆ 45 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದೆ. ಮಳೆಯಾಗುತ್ತಿರುವ ಕಾರಣ ತೇವಾಂಶ ಹೆಚ್ಚಾಗುತ್ತಿದ್ದು ಮೆಕ್ಕೆಜೋಳಕ್ಕೆ ಇದೀಗ ಯೂರಿಯಾ ಹಾಕಲೇಬೇಕಾಗಿದೆ. ಆದ್ದರಿಂದ ಬೇಡಿಕೆ ಹೆಚ್ಚಾಗಿದ್ದು, ಟಿಎಪಿಸಿಎಂಎಸ್ ಹಾಗೂ ಸೊಸೈಟಿಗಳ ಮುಂದೆ ಗೊಬ್ಬರಕ್ಕಾಗಿ ನೂಕುನುಗ್ಗಲು ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಯೂರಿಯಾ ಖರೀದಿಗೆ ಉಂಟಾಗಿರುವ ಗಲಾಟೆಯನ್ನು ತಡೆಗಟ್ಟಲು ಬಳ್ಳಾರಿ ಜಂಟಿ ಕೃಷಿ ನಿರ್ದೇಶಕರ ಸೂಚನೆ ಮೇರೆಗೆ ಸೊಸೈಟಿಗಳಲ್ಲಿ ರೈತರು ತಮ್ಮ ಪಹಣಿ, ಆಧಾರ್ ಕಾರ್ಡ್ ನೀಡಬೇಕೆಂದು ಕಡ್ಡಾಯ ಮಾಡಲಾಗಿದೆ. ಯೂರಿಯಾ ಗೊಬ್ಬರ ಪಡೆಯಲು ಪಹಣಿ, ಆಧಾರ್ ಕಾರ್ಡ್ ಕಡ್ಡಾಯ ಎಂಬ ಮಾಹಿತಿ ತಿಳಿಯುತ್ತಿದಂತೆಯೆ, ಗೊಬ್ಬರ ಖರೀದಿಗೆ ರೈತರ ಸರದಿ ಸಾಲು ಕಡಿಮೆಯಾಗಿತ್ತು.

17-07-2021 Kp Pg 06

For more information visit
University Library Website
Web - uasbagrilibindia.org
E-mail- librarian@uasbangalore.edu.in

ಬೀಜಗಳನ್ನು ಸಸಿ ಮಾಡಿ ನಂತರ ಹೊಲದಲ್ಲಿ ಬಿತ್ತನೆ | ಎಕರೆಗೆ 20 ಕ್ವಿಂಟಾಲ್ ಬೆಳೆ ಬೆಳೆಯುವ ವಿಶ್ವಾಸ

# ವಿಭಿನ್ನವಾಗಿ ತೊಗರಿ ಬೆಳೆಯುತ್ತಿರುವ ರೈತ; ಪದವೀಧರನ ಯಶೋಗಾಥೆ

**ವಿಜಯಪುರ:** ಭಾರತ ಕೃಷಿ ಪ್ರಧಾನ ದೇಶ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಕೃಷಿಯಲ್ಲಿ ಸದಾ ಒಂದಿಲ್ಲೊಂದು ಪ್ರಯೋಗಗಳು ನಡೆಯುತ್ತಲೇ ಇರುತ್ತವೆ. ಅದರಲ್ಲೂ ಈಗಿನ ಬಹುತೇಕ ಯುವಕರು ಕೃಷಿಯತ್ತ ಮುಖಮಾಡಿದ್ದಾರೆ. ಕೃಷಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಿದ್ದಾರೆ.

**ಕೆಲಸಕ್ಕೆ ವಿದಾಯ:** ಅಂತಹುದೇ ವಿಭಿನ್ನ ಪ್ರಯೋಗಕ್ಕೆ ವಿಜಯಪುರ ಜಿಲ್ಲೆಯ ಹಿಕ್ಕನಗುತ್ತಿಯ ದತ್ತಾತ್ರೇಯ ಪದಮಣ್ಣ ಯಡಗಿ ಎಂಬ ಪದವೀಧರ ಯುವ ರೈತ ಹೊಸ ಸಾಹಸಕ್ಕೆ ಕೈ ಹಾಕಿದ್ದಾನೆ. ಪದವಿ ನಂತರ ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ 6 ವರ್ಷಗಳ ಕಾಲ ಕೆಲಸ ಮಾಡಿದ್ದ ದತ್ತಾತ್ರೇಯ, 8 ಗಂಟೆಗಳ ಕಾಲ ದುಡಿಯುವ ಕೆಲಸಕ್ಕೆ ವಿದಾಯ ಹೇಳಿ ಕೃಷಿಯಲ್ಲಿ ತೊಡಗಿದ್ದಾನೆ ಯುವ ರೈತ. ಈತ ಸದ್ಯ ವರ್ಷಕ್ಕೆ 6-7 ಲಕ್ಷ ರುಪಾಯಿ ಸಂಪಾದಿಸುತ್ತಿದ್ದಾನೆ.

ಒಂದು ಕೆ.ಜಿ. ಬೀಜಗಳ ಸಸಿ: ತೊಗರಿಯನ್ನು ಸಾಮಾನ್ಯವಾಗಿ ಬೀಜಗಳನ್ನು ಊರುವ ಮೂಲಕ ಬಿತ್ತುವುದು ವಾಡಿಕೆ. ಆದರೆ ಈ ಯುವ ರೈತ ಮಾತ್ರ ಈ ಬೀಜಗಳನ್ನು ಸಸಿಗಳನ್ನಾಗಿ ಮಾಡುವ ಮೂಲಕ ಬಿತ್ತನೆಗೆ ಮುಂದಾಗಿದ್ದು, ಕಳೆದ ಬಾರಿಗಿಂತ ಅಧಿಕ ಇಳುವರಿ ತಗೆಯುತ್ತೇನೆಂಬ ಹುಮ್ಮಸ್ಸಿನಲ್ಲಿದ್ದಾನೆ. ಪ್ರಸ್ತುತ ಬಿಎಸ್ ಎಂಆರ್ ಎಂಬ ತಳಿಯ 1 ಕೆ.ಜಿ. ಬೀಜಗಳನ್ನ ಸಸಿ ಮಾಡಿ ಹೊಲದಲ್ಲಿ ಬಿತ್ತಿದ್ದಾನೆ.

ದತ್ತಾತ್ರೇಯ ಅವರು ವಿಭಿನ್ನವಾಗಿ ತೊಗರಿ ಬೆಳೆಯನ್ನು ಬೆಳೆಯುತ್ತಿರುವುದಕ್ಕೆ ನಮ್ಮ ಬೆಂಬಲ ಇದೆ, ಆದರೆ ಇದು ಹೆಚ್ಚಿನ ದಿವಸದ ಬೆಳೆ ಆಗಿರುವುದರಿಂದ ಹಾಗೂ ಈ ಬೆಳೆಗೆ ಕಡ್ಡಾಯವಾಗಿ ನೀರು ಬೇಕಾಗಿರುವುದರಿಂದ ರೈತರು ಎಚ್ಚರದಿಂದ ಬೆಳೆಯಬೇಕು. ಎಕರೆಗೆ ಸುಮಾರು 18 ಕ್ವಿಂಟಲ್ ಇಳುವರಿ ಬರುವ ಸಾಧ್ಯತೆಯಿದೆ.

**- ಡಿ.ಡಬ್ಲ್ಯೂ. ರಾಜಶೇಖರ್**
ಜಂಟಿ ಕೃಷಿ ನಿರ್ದೇಶಕ, ವಿಜಯಪುರ

ನಮ್ಮದು ಮೂಲತಃ ಒಕ್ಕಲುತನದ ಕುಟುಂಬ. ಕೃಷಿಯಲ್ಲಿ ನನಗೆ ಮೊದಲಿನಿಂದಲೂ ಆಸಕ್ತಿ ಇತ್ತು. ಓದಿದ್ದೆ ಎಂಬ ಕಾರಣಕ್ಕೆ ಬೆಂಗಳೂರು ಸೇರಿದಂತೆ ಹಲವು ಕಡೆ ಕೆಲಸ ಮಾಡಿದ್ದೆ, ಈಗ ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿದ್ದೇನೆ. ಏನಾದರೂ ವಿಭಿನ್ನವಾಗಿ ಪ್ರಯೋಗ ಮಾಡಬೇಕು ಅನ್ನಿಸಿದ್ದರಿಂದ, ತೊಗರಿಯನ್ನು ವಿಭಿನ್ನವಾಗಿ ಬೆಳೆಯಲು ಪ್ರಾರಂಭಿಸಿದ್ದೇನೆ. ಕಳೆದ ಬಾರಿಗಿಂತ ಹೆಚ್ಚಿನ ಇಳುವರಿ ತೆಗೆಯುತ್ತೇನೆ ಎಂಬ ಭರವಸೆ ಇದೆ.

**- ದತ್ತಾತ್ರೇಯ ಪದಮಣ್ಣ ಯಡಗಿ** ರೈತ

**ಜಿಕೆವಿಕೆಗೆ ಭೇಟಿ:** ದತ್ತಾತ್ರೇಯ ಕಳೆದ ಬಾರಿ ಜಿಕೆವಿಕೆ (ಗಾಂಧಿ ಕೃಷಿ ವಿಜ್ಞಾನ ಕೇಂದ್ರ)ಗೆ ಬಂದಾಗ ಈ ವಿಶೇಷ ಬಿತ್ತನೆ ಬಗ್ಗೆ ಕೇಳಿದ್ದರಂತೆ. ತಾನೂ ಈ ರೀತಿ ಬಿತ್ತನೆ ಮಾಡಬೇಕೆಂದುಕೊಂಡು ಒಂದು ವರ್ಷದಿಂದ ಬಿಎಸ್ ಎಂಆರ್ ತಳಿಯ ಬೀಜಗಳನ್ನು ಹುಡುಕಿ ತಂದು, ಸುಮಾರು 22 ರಿಂದ 24 ದಿನಗಳವರೆಗೆ ಸಸಿಗಳನ್ನು ನೆರಳಿನಲ್ಲಿಯೇ ಬೆಳೆಸಿ, 12 ರಿಂದ 14 ಇಂಚುಗಳಷ್ಟು ಬೆಳೆದ ನಂತರ ಅವುಗಳನ್ನು 1.30 ಎಕರೆಯಲ್ಲಿ, 2 ದಿನಗಳ ಕಾಲ, 3 ಅಡಿಗೊಂದು ಸಸಿಯನ್ನು ನಾಟಿ ಮಾಡಿದ್ದಾರೆ.

ಕಳೆದ ಬಾರಿ ಸಾಮಾನ್ಯ ಬಿತ್ತನೆ ಮಾಡಿದ್ದ ಈ ಯುವ ರೈತ ಎಕರೆಗೆ 10 ಕ್ವಿಂಟಲ್ ತೊಗರಿಯನ್ನು ಬೆಳೆದಿದ್ದರು. ಈಗ ವಿಭಿನ್ನವಾಗಿ ನಾಟಿ ಮಾಡಿದ್ದು, ಕಳೆದ ಬಾರಿಗಿಂತ ಹೆಚ್ಚು, ಅಂದರೆ ಒಂದು ಎಕರೆಗೆ 20 ಕ್ವಿಂಟಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಾಮಾನ್ಯ ಬಿತ್ತನೆಗೆ ಹಾಗೂ ಈ ವಿಧಾನಕ್ಕೆ ಕೇವಲ 2 ಸಾವಿರ ರೂಪಾಯಿಗಳ ವ್ಯತ್ಯಾಸ ಬರುತ್ತದೆ ಎಂದು ದತ್ತಾತ್ರೇಯ ಹೇಳಿದರು.

17-07-2021 Vsv Pg 04

17-07-2021 Vsv Pg 05

# ರಾಜ್ಯದಲ್ಲಿ ಗೊಬ್ಬರ, ಬೀಜಕ್ಕೆ ಕೊರತೆಯಿಲ್ಲ: ಬಿ.ಸಿ.ಪಾಟೀಲ್

ಒಟ್ಟು 17,44,448 ಮೆ.ಟನ್ ರಸಗೊಬ್ಬರಕ್ಕೆ ಬೇಡಿಕೆ | ಸೂಕ್ಷ್ಮ ನೀರಾವರಿ ಯೋಜನೆಯಲ್ಲಿ ರೈತರ ಸಬ್ಸಿಡಿ ಮುಂದುವರಿಕೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ರಸಗೊಬ್ಬರ ಅಥವಾ ಬಿತ್ತನೆ ಬೀಜದ ಕೊರತೆಯಿಲ್ಲ. ರೈತರಿಗೆ ಅಗತ್ಯಕ್ಕೆ ಅನುಸಾರವಾಗಿ ರಸಗೊಬ್ಬರ, ಬಿತ್ತನೆ ಬೀಜ ಪೂರೈಸಲು ಕೃಷಿ ಇಲಾಖೆ ಸಜ್ಜಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ರಸಗೊಬ್ಬರವಾಗಲೀ ಬಿತ್ತನೆ ಬೀಜಕ್ಕಾಗಲೀ ಕೊರತೆ ಕಂಡುಬಂದಿರುವುದಿಲ್ಲ. ಕಾಳಸಂತೆಯಾಗಲೀ ಅಥವಾ ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸಬಾರದು. ಇಂತಹ ಕಾಳ ದಂಧೆಕೋರರ ಮೇಲೆ ಕೃಷಿ ವಿಚಕ್ಷಣಾ ಕಳೆದ ಬಾರಿಯಂತೆ ಈ ಬಾರಿಯೂ ಸಹ ತನ್ನ ಹದ್ದಿನ ಕಣ್ಣುನೆಟ್ಟಿದ್ದು, ಇಂತಹ ಅಕ್ರಮ ಕಂಡುಬಂದಲ್ಲಿ ರೈತರಿಗೆ ಅನ್ಯಾಯವೆಸಗುವವರ ಮೇಲೆ ಯಾವುದೇ ಮುಲಾಜಿಲ್ಲದೇ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

## ಸಬ್ಸಿಡಿ ಮುಂದುವರಿಕೆ

ಸೂಕ್ಷ್ಮ ನೀರಾವರಿ ಯೋಜನೆಯಲ್ಲಿ ಎಲ್ಲಾ ವರ್ಗದ ರೈತರಿಗೆ ಈ ಹಿಂದೆ ನೀಡುತ್ತಿದ್ದ ಸಬ್ಸಿಡಿಯನ್ನು ಅದೇ ಮಾದರಿಯಲ್ಲಿ ಮುಂದುವರಿಸುತ್ತಿರುವುದಾಗಿ ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ. ಈ ಹಿಂದೆ ಎಲ್ಲಾ ವರ್ಗದ 2 ಹೆಕ್ಟೇರ್ ಭೂಮಿಯುಳ್ಳ ರೈತರಿಗೆ ಶೇ.90 ರಷ್ಟು, 5 ಹೆಕ್ಟೇರ್ ಭೂಮಿಯುಳ್ಳ ರೈತರಿಗೆ ಶೇ.45 ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಸಿಎಂ ಆದೇಶದ ನಿರ್ಧಾರದಂತೆ ಇದೀಗ ಮತ್ತೆ ಅದೇ ಹಳೆಯ ಮಾದರಿಯ ಸಬ್ಸಿಡಿಯನ್ನು ಮುಂದುವರಿಸಲಾಗುತ್ತಿದ್ದ 5 ಹೆಕ್ಟೇರ್ ಮೇಲ್ಪಟ್ಟ ಯಾವುದೇ ರೈತರಿಗೆ ಸಬ್ಸಿಡಿ ಇರುವುದಿಲ್ಲ ಎಂದರು.

ಮುಂಗಾರು ಹಂಗಾಮಿನಲ್ಲಿ ಈ ಬಾರಿ 77 ಲಕ್ಷ ಹೆಕ್ಟೇರ್ ಗುರಿ ಹೊಂದಿದ್ದು, ಇಲ್ಲಿಯವರೆಗೆ 44.18 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಂದರೆ ಶೇ.57.38 ಬಿತ್ತನೆಯಾಗಿದೆ. ಈ ಬಾರಿ 6 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಕ್ಕೆ ಬೇಡಿಕೆಯಿದ್ದು, 8 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ಲಭ್ಯತೆಯಿದ್ದು, 3.12 ಲಕ್ಷ ಕ್ವಿಂಟಾಲ್ ವಿತರಣೆಯಾಗಿದೆ. ಇನ್ನೂ ಸಹ ರೈತ ಸಂಪರ್ಕ ಕೇಂದ್ರಗಳಲ್ಲಿ 0.55 ಲಕ್ಷ ಕ್ವಿಂಟಾಲ್ ದಾಸ್ತಾನುಯಿದೆ.

ಕಳೆದ ಏಪ್ರಿಲ್‌ನಿಂದ ಜುಲೈವರೆಗೆ ಡಿಎಪಿ, ಎಂಒಪಿ, ಕಾಂಪ್ಲೆಕ್ಸ್, ಯೂರಿಯಾ ಸೇರಿದಂತೆ ಒಟ್ಟು 17,44,448 ಮೆ.ಟನ್ ರಸಗೊಬ್ಬರಕ್ಕೆ ಬೇಡಿಕೆಯಿದ್ದು, ಇದರಲ್ಲಿ 11,54,320 ಆರಂಭಿಕ ಶಿಲ್ಕು, ಏಪ್ರಿಲ್‌ನಿಂದ ಜು.16 ರವರೆಗೆ 13,41,714 ಮೆ.ಟನ್ ಸರಬರಾಜು ಆಗಿದೆ. 24,96,034 ಮೆ.ಟನ್ ಒಟ್ಟು ದಾಸ್ತಾನು ಇದ್ದು, 14,61,424 ಮೆ.ಟನ್ ಮಾರಾಟ, 10,34,610 ಉಳಿಕೆ ದಾಸ್ತಾನು ಇದೆ ಎಂದು ವಿವರಿಸಿದರು.

## ನಿಗದಿತ ಸಮಯಕ್ಕೆ ಬೆಳೆ ವಿಮೆ

2021-22 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಒಟ್ಟು 36 ಬೆಳೆಗಳನ್ನು ಬೆಳೆ ವಿಮೆಗೆ ನೋಂದಾಯಿಸಲು ಅಧಿಸೂಚಿ ಸಲಾಗಿದ್ದು, ಇಲ್ಲಿಯವರೆಗೆ 3.71 ಲಕ್ಷ ರೈತರು 350 ಕೋಟಿ. ರು. ಮೊತ್ತದ ಪ್ರೀಮಿಯಂ ಮೊತ್ತ ಪಾವತಿಸಿ ನೋಂದಣಿ ಮಾಡಿಕೊಂಡಿರುತ್ತಾರೆ. ಹೆಚ್ಚಿನ ವಿವರಗಳಿಗೆ ಸಮೀಪದ ಕೃಷಿ ಇಲಾಖೆ ಕಚೇರಿ ಸಂಪರ್ಕಿಸಬಹುದಾಗಿದ್ದು, ನಿಗದಿತ ಸಮಯದೊಳಗೆ ಬೆಳೆವಿಮೆಗೆ ನೋಂದಾಯಿಸಿಕೊಳ್ಳುವಂತೆ ತಿಳಿಸಿದರು.

## ಮುಂದಿನ ವಾರ ದೆಹಲಿಗೆ ಭೇಟಿ

**ಬೆಂಗಳೂರು:** ಸಂಸದರಾದ ಶೋಭಾ ಕರಂದ್ಲಾಜೆ ಅವರಿಗೆ ಕೇಂದ್ರದ ಕೃಷಿ ಇಲಾಖೆ, ಭಗವಂತ್ ಖೂಬಾ ಅವರಿಗೆ ಕೇಂದ್ರದ ರಸಗೊಬ್ಬರ ಖಾತೆ ನೀಡಿರುವುದು ಸಂತಸ ತಂದಿದ್ದು, ನೂತನ ಸಚಿವರನ್ನು ಭೇಟಿ ಮಾಡಲು ಮುಂದಿನ ವಾರ ದೆಹಲಿಗೆ ತೆರಳುತ್ತಿರುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ನಮ್ಮ ಕರ್ನಾಟಕದವರಿಗೆ ಕೇಂದ್ರ ಸಚಿವ ಸ್ಥಾನ ದೊರೆತಿರುವುದರಿಂದ ನಮ್ಮ ರಾಜ್ಯಕ್ಕೆ ಇನ್ನಷ್ಟು ಶಕ್ತಿ ಬರಲಿದೆ. ತಾವು ಕೃಷಿ ಸಚಿವರಾಗಿರುವುದರಿಂದ ರಾಜ್ಯದಲ್ಲಿನ ಕೃಷಿ ಸಂಬಂಧಿತ ಅಭಿವೃದ್ಧಿ ಯೋಜನೆಗಳ ಬಗ್ಗೆ ಚರ್ಚಿಸುವುದರ ಜತೆ ನೂತನ ಸಚಿವರನ್ನು ಅಭಿನಂದಿಸಲು ದೆಹಲಿಗೆ ತೆರಳುತ್ತಿದ್ದು, ತಮ್ಮೊಂದಿಗೆ ಸಹಕಾರ ಇಲಾಖೆಯ ಎಸ್.ಟಿ.ಸೋಮಶೇಖರ್ ಸಹ ಕೃಷಿ ಸಂಬಂಧಿತ ಚರ್ಚೆಗೆ ಭೇಟಿ ನೀಡಲಿದ್ದಾರೆ ಎಂದರು. ಮುಖ್ಯಮಂತ್ರಿ ಸ್ಥಾನದಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಸಿಎಂ ಯಡಿಯೂರಪ್ಪ ರಾಜ್ಯದ ಅಭಿವೃದ್ಧಿಗಳು ಸರಕಾರದ ಸಾಧನೆಗಳ ಬಗ್ಗೆ ಚರ್ಚಿಸಲು ದೆಹಲಿಯಲ್ಲಿ ಪ್ರಧಾನಿಗಳು ಹಾಗೂ ಕೇಂದ್ರದ ಸಚಿವರನ್ನು ಭೇಟಿ ಮಾಡಲಿದ್ದಾರೆಯೇ ಹೊರತು ಇದರಲ್ಲಿ ಯಾವುದೇ ರಾಜಕೀಯ ಉದ್ದೇಶವಿಲ್ಲ ಎಂದರು.

**ಕಾಂಗ್ರೆಸ್ ಅರ್ಜಿ ಮಾರಾಟವಾಗಿಲ್ಲ:** ಕಾಂಗ್ರೆಸ್‌ನಲ್ಲಿ ಅರ್ಜಿಗಳು ಮಾರಾಟವಾಗುತ್ತಿಲ್ಲ, ಹೀಗಾಗಿ ಹರಾಜಿಗಿಟ್ಟಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಕನಸು ನನಸಾಗುವುದಿಲ್ಲ, ಅವರ ತಟ್ಟೆಯಲ್ಲೇ ಕತ್ತೆ ಸತ್ತು ಬಿದ್ದಿದೆ. ನಮ್ಮ ತಟ್ಟೆಯಲ್ಲಿ ಬಿದ್ದಿರುವ ನೊಣವನ್ನು ನೋಡಲು ಮುಂದಾಗಿದ್ದಾರೆ ಎಂದು ಟೀಕಿಸಿದರು.

# ಸೂಕ್ಷ್ಮ ನೀರಾವರಿ ಸಬ್ಸಿಡಿ ಮುಂದುವರಿಕೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆಯಡಿ ಎಲ್ಲ ವರ್ಗದ ರೈತರಿಗೆ ಈ ಹಿಂದೆ ನೀಡುತ್ತಿದ್ದ ಸಬ್ಸಿಡಿಯನ್ನು ಅದೇ ಮಾದರಿಯಲ್ಲಿ ಮುಂದುವರಿಸುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ್ ಸ್ಪಷ್ಟಪಡಿಸಿದರು.

ರಾಜ್ಯದ ಎಲ್ಲ ಜಿಲ್ಲಾ ಕೃಷಿ ಅಧಿಕಾರಿಗಳ ಜತೆ ಮುಂಗಾರು ಹಂಗಾಮಿನ ಚಟುವಟಿಕೆ ಕುರಿತು ಕೃಷಿ ಸಚಿವರು ಹಾಗೂ ಇಲಾಖಾಧಿಕಾರಿಗಳು ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಹಿಂದೆ 2 ಹೆಕ್ಟೇರ್ ಭೂಮಿಯುಳ್ಳ ರೈತರಿಗೆ ಶೇ.90, 5 ಹೆ. ಭೂಮಿಯುಳ್ಳ ರೈತರಿಗೆ ಶೇ.45 ಸಬ್ಸಿಡಿ ನೀಡಲಾಗುತ್ತಿತ್ತು. ಸಿಎಂ ಆದೇಶದ ನಿರ್ಧಾರದಂತೆ ಇದೀಗ ಮತ್ತೆ ಅದೇ ಮಾದರಿಯ ಸಬ್ಸಿಡಿಯನ್ನು ಮುಂದುವರಿಸಲಾಗುವುದು. 5 ಹೆ. ಮೇಲ್ಪಟ್ಟ ಯಾವುದೇ ರೈತರಿಗೆ ಸಬ್ಸಿಡಿ ಇರುವುದಿಲ್ಲ ಎಂದು ಹೇಳಿದರು.

» ಪಹಣಿಯಲ್ಲಿ ಬೆಳೆ ಸಮೀಕ್ಷೆ ವಿವರ ನಮೂದು

**ಪಹಣಿಯಲ್ಲಿ ಬೆಳೆ ಸಮೀಕ್ಷೆ ವಿವರ:** ಕಳೆದ ವರ್ಷದಂತೆ ರೈತನೇ ತನ್ನ ಬೆಳೆಗೆ ತಾನೇ ಸಮೀಕ್ಷೆ ನಡೆಸಿ, 'ನನ್ನ ಬೆಳೆ ನನ್ನ ಹಕ್ಕು' ಪ್ರಮಾಣಪತ್ರ ನೀಡುವ ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆಗೆ ಚಾಲನೆ ನೀಡಲಾಗಿದೆ. ಈ ವರ್ಷ ಮುಂಗಾರು ಹಂಗಾಮಿನಲ್ಲಿ ಸುಮಾರು 2.10 ಕೋಟಿ ತಾಕುಗಳಲ್ಲಿ ಬೆಳೆ ಸಮೀಕ್ಷೆ ಉದ್ದೇಶ ಹೊಂದಲಾಗಿದೆ. 2021-22ನೇ ಸಾಲಿನಲ್ಲಿ ಪೂರ್ವ ಮುಂಗಾರಿನಲ್ಲಿ ಇಲ್ಲಿಯವರೆಗೆ 1.09 ಲಕ್ಷ ತಾಕುಗಳನ್ನು ರೈತರೇ ಸ್ವತಃ ಆ್ಯಪ್‌ನಲ್ಲಿ ಹಾಗೂ 28.96 ಲಕ್ಷ ತಾಕುಗಳನ್ನು ಖಾಸಗಿ ನಿವಾಸಿಗಳ ಮೂಲಕ ಅಪ್‌ಲೋಡ್ ಮಾಡಲಾಗಿದೆ. ಪ್ರಸಕ್ತ ವರ್ಷದಿಂದ ರೈತರ ಬೆಳೆ ಸಮೀಕ್ಷೆ ಮಾಹಿತಿ ಇನ್ನುಮುಂದೆ ರೈತರ ಆರ್‌ಟಿಸಿಯಲ್ಲಿ ನಮೂದಾಗಲಿದೆ ಎಂದರು.

2021-22ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಒಟ್ಟು 36 ಬೆಳೆಗಳನ್ನು ವಿಮೆಗೆ ನೋಂದಾಯಿಸಲು ಅಧಿಸೂಚಿಸಲಾಗಿದ್ದು, ಇಲ್ಲಿಯವರೆಗೆ 3.71 ಲಕ್ಷ ರೈತರು 3504.06 ಲಕ್ಷ ರೂ. ಮೊತ್ತದ ಪ್ರೀಮಿಯಮ್ ಮೊತ್ತ ಪಾವತಿಸಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

**ಶೇಕಡ 57.38 ಬಿತ್ತನೆ**

**ಮುಂಗಾರು ಹಂಗಾಮಿನಲ್ಲಿ ಈ ಬಾರಿ 77 ಲಕ್ಷ ಹೆ. ಬಿತ್ತನೆ ಗುರಿ ಹೊಂದಿದ್ದು, ಈವರೆಗೆ 44.18 ಲಕ್ಷ ಹೆ. ಅಂದರೆ ಶೇ.57.38 ಬಿತ್ತನೆಯಾಗಿದೆ. 6 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಕ್ಕೆ ಬೇಡಿಕೆಯಿದ್ದು, 8 ಲಕ್ಷ ಕ್ವಿಂಟಾಲ್ ಲಭ್ಯತೆಯಿದೆ. 3.12 ಲಕ್ಷ ಕ್ವಿಂಟಾಲ್ ವಿತರಣೆಯಾಗಿದೆ. ರೈತ ಸಂಪರ್ಕ ಕೇಂದ್ರಗಳಲ್ಲಿ 0.55 ಲಕ್ಷ ಕ್ವಿಂ. ದಾಸ್ತಾನಿದೆ. ಏಪ್ರಿಲ್‌ನಿಂದ ಜುಲೈವರೆಗೆ ಡಿಎಪಿ, ಎಂಒಪಿ, ಕಾಂಪ್ಲೆಕ್ಸ್, ಯೂರಿಯಾ ಸೇರಿ ಒಟ್ಟು 17,44,448 ಮೆ.ಟನ್ ರಸಗೊಬ್ಬರಕ್ಕೆ ಬೇಡಿಕೆಯಿದ್ದು, ಇದರಲ್ಲಿ 11,54,320 ಆರಂಭಿಕ ಶಿಲ್ಕು, ಏಪ್ರಿಲ್‌ನಿಂದ ಜು.16ರವರೆಗೆ 13,41,714 ಮೆ.ಟನ್ ಸರಬರಾಜು ಆಗಿದೆ. 24,96,034 ಮೆ.ಟನ್ ಒಟ್ಟು ದಾಸ್ತಾನಿದ್ದು, 14,61,424 ಮೆ.ಟನ್ ಮಾರಾಟವಾಗಿ 10,34,610 ಉಳಿದಿದೆ ಎಂದು ಬಿ.ಸಿ.ಪಾಟೀಲ್ ವಿವರಿಸಿದರು.**

ಯಾವುದೇ ರಸಗೊಬ್ಬರ, ಬಿತ್ತನೆ ಬೀಜಕ್ಕೆ ಕೊರತೆ ಕಂಡುಬಂದಿಲ್ಲ. ರೈತರ ಅಗತ್ಯಕ್ಕನುಸಾರವಾಗಿ ರಸಗೊಬ್ಬರ, ಬಿತ್ತನೆ ಬೀಜಗಳನ್ನು ಪೂರೈಸಲು ಇಲಾಖೆ ಸಜ್ಜಾಗಿದೆ. ಕಾಳಸಂತೆ, ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವ ಪ್ರಕರಣ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು.

| **ಬಿ.ಸಿ.ಪಾಟೀಲ್** ಕೃಷಿ ಸಚಿವ

17-07-2021 Vk Pg 09

ಬೇಡಿಕೆ ಇದ್ದರೂ ಪೂರೈಕೆ ಇಲ್ಲ | ಕೈಗಾರಿಕೆಗಳಿಗೆ ಚೀನಾ, ವಿಯೆಟ್ನಾಂನಿಂದ ಆಮದು

# ಬಿದಿರು ಬೆಳೆಯಲು ರಾಜ್ಯದಲ್ಲಿ ನಿರಾಸಕ್ತಿ

■ ಆತೀಶ್ ಬಿ. ಕನ್ನಾಳೆ ಶಿವಮೊಗ್ಗ
aatish.kannale@timesgroup.com

ರಾಜ್ಯದಲ್ಲಿ ಕೈಗಾರಿಕೆ ಸೇರಿದಂತೆ ನಾನಾ ವಿಭಾಗಗಳಲ್ಲಿ ಬಿದಿರಿಗೆ ಭಾರಿ ಬೇಡಿಕೆ ಇದೆ. ಆದರೆ, ಬಿದಿರು ಬೆಳೆಸುವ ವಿಚಾರದಲ್ಲಿ ನಿರಾಸಕ್ತಿ ಇರುವುದರಿಂದ ದೊಡ್ಡ ಪ್ರಮಾಣದ ಬಿದಿರನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದಲ್ಲಿಸುಮಾರು ಎರಡು ಲಕ್ಷ ಹೆಕ್ಟೇರ್ ಬಿದಿರು ಬೆಳೆಯುವ ಪ್ರದೇಶವಿದೆ. ವರ್ಷಕ್ಕೆ 3 ಲಕ್ಷ ಟನ್‌ನಷ್ಟು ಬೇಡಿಕೆ ಇದ್ದು, 2 ಲಕ್ಷ ಟನ್ ಮಾತ್ರ ಪೂರೈಕೆಯಾಗುತ್ತಿದೆ. ವಾರ್ಷಿಕ 75-85 ಸಾವಿರ ಟನ್ ಬಿದಿರನ್ನು ಹೊರ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ರಾಜ್ಯದ ದಾಂಡೇಲಿ, ಹರಿಹರ ಸೇರಿದಂತೆ ಕೆಲವೆಡೆ ಬಿದಿರಿನಿಂದ ಪ್ಲೈವುಡ್, ಪಲ್ಪ್ ವುಡ್, ಪೇಪರ್ ಇತ್ಯಾದಿಗಳನ್ನು ಉತ್ಪಾದಿಸುವ ಉದ್ದಿಮೆಗಳಿವೆ. ಆದರೆ, ಅವುಗಳಿಗೆ ಸ್ಥಳೀಯ ಮಾರುಕಟ್ಟೆಯಿಂದ ನಿರೀಕ್ಷಿತ ಮಟ್ಟದ ಬಿದಿರು ಪೂರೈಕೆ ಆಗದೇ ಇರುವುದರಿಂದ ಬೇರೆ ದೇಶಗಳ ಮೇಲೆ ಅವಲಂಬಿಸುವ ಸ್ಥಿತಿ ಇದೆ.

ಕರ್ನಾಟಕದಲ್ಲಿ 25 ಪ್ರಭೇದದ ಬಿದಿರು ಬೆಳೆಸಲಾಗುತ್ತಿದ್ದರೂ ಪ್ರಸ್ತುತ 8-9 ಪ್ರಭೇದಕ್ಕೆ ಮಾತ್ರ ಆದ್ಯತೆ ನೀಡಲಾಗುತ್ತಿದೆ. ಬಿದಿರು ಉತ್ಪನ್ನಗಳನ್ನು ಕಟ್ಟಡ ನಿರ್ಮಾಣ, ಪೀಠೋಪಕರಣ ತಯಾರಿಕೆ, ಕೈಗಾರಿಕೆಗಳಲ್ಲಿ ಉಪಯೋಗಿಸಲಾಗುತ್ತಿದೆ. ಇದಲ್ಲದೇ ಪೇಪರ್ ತಯಾರಿಕೆ, ಟೆಕ್ಸ್ ಟೈಲ್ಸ್ ಉದ್ಯಮ, ಆಹಾರೋದ್ಯಮ ಮತ್ತು ಇಂಧನ ತಯಾರಿಕೆಗೆ ಬಳಸಲಾಗುತ್ತಿದೆ. ಶೇ.90ರಷ್ಟು ಬಿದಿರನ್ನು ಪ್ಲೈವುಡ್, ಪಲ್ಪ್ ವುಡ್, ಪೇಪರ್ ತಯಾರಿಕೆ ಬಳಸಿದಿದರೆ ಶೇ.10ರಷ್ಟನ್ನು ಇನ್ನುಳಿದ ಉದ್ದಿಮೆಗಳಲ್ಲಿ ಬಳಸಲಾಗುತ್ತಿದೆ.

ಬಿದಿರು ಬೆಳೆಗೆ ಪ್ರೋತ್ಸಾಹ ನೀಡುವುದು ಹಾಗೂ ರೈತರನ್ನು ಆರ್ಥಿಕವಾಗಿ ಸಬಲಗೊಳಿಸಲು ಕೇಂದ್ರ ಸರಕಾರ ರಾಷ್ಟ್ರೀಯ ಬಿದಿರು ಮಿಷನ್(ಎನ್.ಬಿ.ಎಂ) ಮೂಲಕ ಹಲವು ಸವಲತ್ತುಗಳನ್ನು ನೀಡುತ್ತಿದೆ. ಆದರೂ ಮಾರುಕಟ್ಟೆ ವ್ಯವಸ್ಥೆಯಲ್ಲಿನ ಲೋಪಗಳಿಂದಾಗಿ ಬಿದಿರು ಬೆಳೆಯುವುದಕ್ಕೆ ರೈತರು ಮುಂದೆ ಬರುತ್ತಿಲ್ಲ, ರಾಷ್ಟ್ರದ ಉಳಿದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಬಿದಿರು ಬೆಳೆ ಬೆಳೆಯುವುದಕ್ಕೆ ಹೆಚ್ಚು ಸೂಕ್ತ ಹವಾಮಾನ ಹೊಂದಿದೆ ಎನ್ನುತ್ತಾರೆ ತಜ್ಞರು.

ಬಿದಿರು ಬೆಳೆಗಾರರಿಗೆ ಸ್ಥಳೀಯ ಮಾರುಕಟ್ಟೆ ಸೃಷ್ಟಿಸಿ, ಉದ್ದಿಮೆ ಹಾಗೂ ಬೆಳೆಗಾರರ ನಡುವೆ ಸಂಪರ್ಕ ಕೊಂಡಿ ಬಲಗೊಂಡರೆ ಕರ್ನಾಟಕದಲ್ಲಿ ಬಿದಿರು ಬೆಳೆಗೆ ಚೈತನ್ಯ ಸಿಗಬಹುದು. ರಾಜ್ಯದ ವಾತಾವರಣ ಬಿದಿರು ಬೆಳೆಯುವುದಕ್ಕೆ ಪೂರಕವಾಗಿದ್ದು ಸರಕಾರ ಈ ಬಗ್ಗೆ ಗಮನಹರಿಸಬೇಕು. ಹಲವು ಪ್ರಗತಿಪರ ರೈತರು ಬಿದಿರು ಬೆಳೆದಿದ್ದು, ಅವರ ಯಶೋಗಾಥೆಗಳನ್ನು ಮುನ್ನೆಲೆಗೆ ತರಬೇಕು.

**-ಡಾ.ಕೇಶವ್ ಕೊರ್ಸೆ** ಸಂರಕ್ಷಣಾ ಜೀವಶಾಸ್ತ್ರಜ್ಞ, ಶಿರಸಿ

### ಉತ್ಪಾದನೆಗೆ ಯಾಕೆ ನಿರಾಸಕ್ತಿ?

- ಬಿದಿರು ನಾಟಿ ಮಾಡಿದ ತಕ್ಷಣ ಲಾಭ ಬರುವುದಿಲ್ಲ, ಅದಕ್ಕಾಗಿ, 6-7 ವರ್ಷ ಕಾಯಲೇಬೇಕು.
- ಸ್ಥಳೀಯಕ್ಕಿಂತ ಆಮದು ಮಾಡಿಕೊಳ್ಳುವ ಬಿದಿರೇ ಅಗ್ಗದ ದರದಲ್ಲಿ ದೊರೆಯುತ್ತಿದೆ.
- ಬಿದಿರು ಬೆಳೆದರೂ ಅವುಗಳನ್ನು ಕೈಗಾರಿಕೆಗಳಿಗೆ ಪೂರೈಸುವ ಕೊಂಡಿ ಸೃಷ್ಟಿಯಾಗಿಲ್ಲ.

### ಬಿದಿರು ಬೆಳೆ ಇಳಿಕೆಗೆ ಕಾರಣ

ಪಶ್ಚಿಮಘಟ್ಟಕ್ಕೆ ಅಂಟಿಕೊಂಡಿರುವ ಜಿಲ್ಲೆಗಳಲ್ಲಿ 1970-75ರ ಹೊತ್ತಿನಲ್ಲಿ ಬಿದಿರು ಸಮೃದ್ಧವಾಗಿತ್ತು. ಆದರೆ, ಮಾನವ ಉಪಟಳ, ಅರಣ್ಯಕ್ಕೆ ಬೆಂಕಿ, ಒತ್ತುವರಿ, ಅಕ್ರಮವಾಗಿ ಬಿದಿರು ಕಡಿತಲೆ, ಉಳುಮೆಯಲ್ಲಿ ಇಳಿಕೆ ಹಾಗೂ ಬಿದಿರು ಬೆಳೆಯುವ ನೈಸರ್ಗಿಕ ಕಾಡುಗಳಲ್ಲಿ ಲಂಟಾನಾ, ಹಿಪಟೋರಿಯಂನಂತಹ ಗಿಡಗಳು ಬೆಳೆದು ಬಿದಿರು ಬೆಳೆ ಇಳಿಮುಖವಾಗಿದೆ. ಬಿದಿರು ಬೆಳೆಯುವುದಕ್ಕೆ ಲೀಸ್ ನೀಡಲಾಗಿರುವ ಪ್ರದೇಶಗಳಲ್ಲಿ ಬೆಳೆಸುವುದಕ್ಕೆ ನಿರಾಸಕ್ತಿ ತೋರಲಾಗುತ್ತಿದೆ. ಈ ಎಲ್ಲ ಅಂಶ ಮನಗಂಡು ಕೇಂದ್ರ ಸರಕಾರ ರಾಷ್ಟ್ರೀಯ ಬಿದಿರು ಮಿಷನ್ ಜಾರಿಗೆ ತಂದಿದೆ. ಬಿದಿರು ಬೆಳೆಯುವ ಕ್ಷೇತ್ರ ಹಾಗೂ ಬೇಡಿಕೆಗೆ ಅನುಗುಣವಾಗಿ ಉತ್ಪಾದಿಸುವ ಉದ್ದೇಶವಿದೆ.

17-07-2021
Vk Pg 04

# ನಾಲ್ಕು ತಿಂಗಳಲ್ಲಿ 483 ಟನ್ ಮಾವು ರಫ್ತು

ಬೆಂಗಳೂರು: ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಈ ವರ್ಷದ ಮಾರ್ಚ್‌ನಿಂದ ಜೂನ್‌ವರೆಗಿನ ನಾಲ್ಕು ತಿಂಗಳ ಅವಧಿಯಲ್ಲಿ ಒಟ್ಟು 483 ಟನ್‌ನಷ್ಟು ಮಾವು ವಿವಿಧ ದೇಶಗಳಿಗೆ ರಫ್ತಾಗಿದೆ.

ಜೂನ್ ತಿಂಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ 169 ಟನ್‌ನಷ್ಟು ಮಾವು ರಫ್ತಾಗಿದೆ. ಮಾರ್ಚ್‌ನಲ್ಲಿ 43.7 ಟನ್, ಏಪ್ರಿಲ್ 110 ಟನ್ ಹಾಗೂ ಮೇ ತಿಂಗಳಲ್ಲಿ 158 ಟನ್ ಮಾವು ರಫ್ತಾಗಿದೆ.

ಈ ವರ್ಷದ ಮಾವಿನ ಅವಧಿಯಲ್ಲಿ ದೋಹಾ ಹೆಚ್ಚಿನ ಪ್ರಮಾಣದಲ್ಲಿ ಮಾವು ತರಿಸಿಕೊಂಡಿದ್ದು, 140 ಟನ್ ಮಾವು ರಫ್ತಾಗಿದೆ. ಲಂಡನ್‌ಗೆ 68 ಟನ್ ಹಾಗೂ ಸಿಂಗಪುರಕ್ಕೆ 55 ಟನ್ ಮಾವು ರಫ್ತಾಗಿದೆ.

‘ವಿಮಾನ ನಿಲ್ದಾಣದಲ್ಲಿರುವ ಏರ್ ಇಂಡಿಯಾ ಎಸ್‌ಎಟಿಎಸ್ ಮತ್ತು ಮೆಂಜೀಸ್ ಏವಿಯೇಷನ್ ಸಂಸ್ಥೆಗಳ ಬೆಂಬಲದೊಂದಿಗೆ ಬೆಂಗಳೂರಿನಿಂದ ಗುಣಮಟ್ಟ ಮತ್ತು ತಾಜಾ ಸ್ಥಿತಿಯಲ್ಲಿ ಮಾವು ತಲುಪಿದೆ. ಮಾವಿನ ಸಂಗ್ರಹಣೆ ಮತ್ತು ಸಾಗಣೆ ವ್ಯವಸ್ಥೆಯೂ ಸರಾಗವಾಗಿತ್ತು’ ಎಂದು ಪ್ರಕಟಣೆ ತಿಳಿಸಿದೆ.



17-07-2021
Pv Pg 02

## ಹಸಿ ತ್ಯಾಜ್ಯದಿಂದ ಸಾವಯವ ಗೊಬ್ಬರ ಉತ್ಪಾದನೆ

# ತ್ಯಾಜ್ಯದಿಂದ ಆದಾಯ!

**ಬೆಂಗಳೂರು:** ನಗರದ ಬೇಗೂರು ವಾರ್ಡ್‌ನ ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ ತ್ಯಾಜ್ಯದ ವಿಲೇವಾರಿ ಮತ್ತು ಮರುಬಳಕೆಯಲ್ಲಿ ಶೇ.70 ಸ್ವಾವಲಂಬನೆ ಸಾಧಿಸಲಾಗಿದ್ದು, ಇತರೆ ವಸತಿ ಸಮುಚ್ಚಯಗಳಿಗೆ ಮಾದರಿಯಾಗಿದೆ.

ಅಕ್ಷಯನಗರದಲ್ಲಿ ನಿರ್ಮಾಣವಾಗಿರುವ ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ಅಪಾರ್ಟ್‌ಮೆಂಟ್‌ನಲ್ಲಿ 1,830 ಮನೆಗಳಿದ್ದು, 5 ಸಾವಿರ ಜನರು ವಾಸವಿದ್ದಾರೆ. ಇಲ್ಲಿನ ನಿವಾಸಿಗಳು ಶೇ.99 ತ್ಯಾಜ್ಯ ವಿಂಗಡಿಸಿ ನೀಡುತ್ತಿದ್ದಾರೆ. ಮಾಸಿಕ 45 ಟನ್ ತ್ಯಾಜ್ಯ ಉತ್ಪಾದನೆ ಆಗುತ್ತಿದ್ದು, ಈ ತ್ಯಾಜ್ಯವನ್ನು ಬಿಬಿಎಂಪಿ ಘನತ್ಯಾಜ್ಯ ವಿಭಾಗಕ್ಕೆ ನೀಡದೆ ಆದಾಯ ಗಳಿಸುವ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಮಾಸಿಕ 30 ಟನ್ ಹಸಿ ತ್ಯಾಜ್ಯದಿಂದ ಸಾವಯವ ಗೊಬ್ಬರ ಉತ್ಪಾದನೆ ಮಾಡಲಾಗುತ್ತಿದೆ. ಸುಮಾರು 15 ಟನ್ ಒಣಕಸವನ್ನು ಮರುಬಳಕೆ ವಸ್ತು ತಯಾರಿಸುವ ಕಂಪನಿಗಳಿಗೆ ಮಾರಾಟ ಮಾಡಲಾಗುತ್ತಿದೆ.

**» ಬೇಗೂರಿನ ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ನಿವಾಸಿಗಳ ಸಾಧನೆ**

**3 ವರ್ಷಗಳ ಶ್ರಮ:** ಮೊದಲು ತ್ಯಾಜ್ಯ ವಿಲೇವಾರಿಗೆ ಯೋಜನೆ, ಸ್ವಯಂಸೇವಕರ ತಂಡ ರಚನೆ, ಮನೆ-ಮನೆಗೆ ತ್ಯಾಜ್ಯ ಮರುಬಳಕೆ ಅರಿವು ಹಾಗೂ ಮನೆಯಿಂದ ಕಸ ಸಂಗ್ರಹಿಸುವ ಅಪಾರ್ಟ್‌ಮೆಂಟ್‌ನ ಸ್ವಚ್ಛತಾ ಸಿಬ್ಬಂದಿಗೆ ತ್ಯಾಜ್ಯ ವಿಂಗಡಣೆ ಮಾಡುವ ತರಬೇತಿ ನೀಡಲಾಯಿತು. ಆರಂಭದಲ್ಲಿ ಸ್ಥಳೀಯ ನಿವಾಸಿಗಳಿಂದ ವಿರೋಧ ವ್ಯಕ್ತವಾಗಿತ್ತು, 3 ವರ್ಷಗಳ ನಂತರ ಯಶಸ್ಸು ಸಿಕ್ಕಿದೆ.

**1 ಟನ್ ಉಚಿತ ಗೊಬ್ಬರ ನೀಡಿಕೆ:** ನಾವು ಹಸಿ ತ್ಯಾಜ್ಯದಿಂದ ಗೊಬ್ಬರ ಉತ್ಪಾದಿಸುವ ಮೂಲಕ, ಮಾಸಿಕ ಉದ್ಯಾನ ನಿರ್ವಹಣೆಗೆ ಖರ್ಚು ಮಾಡುತ್ತಿದ್ದ 70ರಿಂದ 80 ಸಾವಿರ ರೂ. ಉಳಿಸಿದ್ದೇವೆ. ಮಳೆಗಾಲದಲ್ಲಿ ಯಾವುದೇ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಸ್ಥಳದಲ್ಲಿ ಸಸಿ ನೆಡುವ ಯೋಜನೆ ಹಮ್ಮಿಕೊಂಡಿದ್ದರೆ ಅವರಿಗೆ 1 ಟನ್ ಉಚಿತ ಗೊಬ್ಬರ ನೀಡಲಾಗುವುದು ಎಂದು ಅಪಾರ್ಟ್‌ಮೆಂಟ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ಕಾರ್ತಿಕೇಯ ಖನ್ನಾ ತಿಳಿಸಿದ್ದಾರೆ. ವೆಬ್‌ಸೈಟ್: compost.whcaowa@gmail.com.

## ಸಾವಯವ ಗೊಬ್ಬರ ಉತ್ಪಾದನೆ

ಮನೆಗಳಲ್ಲಿ ಉತ್ಪಾದನೆಯಾಗುವ ತರಕಾರಿ, ಹಣ್ಣು, ಅಡುಗೆ ಸಾಮಗ್ರಿ ಮಿಕ್ಕಿರುವುದು ಸೇರಿ ಎಲ್ಲ ಹಸಿ ತ್ಯಾಜ್ಯವನ್ನು ಬೇರ್ಪಡಿಸಿ ಸಂಗ್ರಹಿಸಲಾಯಿತು. ಪ್ರತಿನಿತ್ಯ 1 ಟನ್‌ಗೂ ಅಧಿಕ ಹಸಿ ತ್ಯಾಜ್ಯವನ್ನು ಸಾವಯವ ಗೊಬ್ಬರ ತಯಾರಿಸಲು ಮೆಶ್ ಚೇಂಬರ್ ಗುಂಡಿ ರೂಪಿಸಲಾಯಿತು. ತ್ಯಾಜ್ಯಕ್ಕೆ ನೊಣ ಹಾಗೂ ಇತರೆ ಕ್ರಿಮಿ ಕೀಟಗಳು ಬರದಂತೆ ಕೀಟ ನಿರೋಧಕ ದ್ರಾವಣ ಸಿಂಪಡಣೆ ಮಾಡಲಾಯಿತು. ಈಗ ಪ್ರತಿನಿತ್ಯ 500 ಕೆ.ಜಿ ಸಾವಯವ ಗೊಬ್ಬರ ಉತ್ಪಾದಿಸಲಾಗುತ್ತಿದೆ. ಇದನು ಉದ್ಯಾನ, ಸುತ್ತಲಿನ ಗಿಡ ಹಾಗೂ ತಾರಸಿ ತೋಟಕ್ಕೂ ಬಳಸಲಾಗುತ್ತಿದೆ.

## 40 ಸಾವಿರ ರೂ. ಗಳಿಕೆ

2020ರ ಸೆಪ್ಟೆಂಬರ್‌ವರೆಗೆ ಮಾಸಿಕ 15 ಟನ್ ತ್ಯಾಜ್ಯವನ್ನು ಪಾಲಿಕೆಗೆ ನೀಡಲಾಗುತ್ತಿತ್ತು. ಆದರೆ, ಒಣತ್ಯಾಜ್ಯದಲ್ಲಿ ಮರುಬಳಕೆಯಾಗುವ ವಸ್ತುಗಳನ್ನು ಬೇರ್ಪಡಿಸಿ ಸಂಗ್ರಹಿಸಿ, ಮಾರಾಟ ಮಾಡುವ ಸಿದ್ಧತೆ ಮಾಡಲಾಯಿತು. ಅದರಂತೆ, ಪ್ಲಾಸ್ಟಿಕ್,

ಟಿನ್, ಲೋಹದ ವಸ್ತುಗಳು, ಪೇಪರ್, ರಟ್ಟಿನ ಬಾಕ್ಸ್ ಸೇರಿ ಇತ್ಯಾದಿ ವಸ್ತುಗಳನ್ನು ಬೇರ್ಪಡಿಸಲು ಪ್ರತ್ಯೇಕ ಸಿಬ್ಬಂದಿ ನಿಯೋಜಿಸಲಾಯಿತು. ಒಣ ತ್ಯಾಜ್ಯದಲ್ಲಿ ಮಾಸಿಕ 4 ಟನ್ ವಸ್ತು ಮಾರಾಟ ಮಾಡಿ 40 ಸಾವಿರ ರೂ. ಆದಾಯ ಗಳಿಸಲಾಗುತ್ತಿದೆ ಎಂದು ಕಾರ್ತಿಕೇಯ ಹೇಳಿದ್ದಾರೆ.

17-07-2021
Vv spl
Pg 03